ಏನನೂ!' ದುಡುಕಿನ ದುರಂತ ಕಂಡೂ ತಪ್ಪಿಸಲು ಸಾಧ್ಯವಿಲ್ಲದ ಅಸಹಾಯಕ. ಒಟ್ಟಿನಲ್ಲಿ ಹೊಸಬಗೆಯಲ್ಲಿ ಸಿಂಹಾವಲೋಕನ ಕ್ರಮದಲ್ಲಿ ಸಂಕ್ಷಿಪ್ತವಾಗಿ ಮಹಾಭಾರತವನ್ನು ಇಲ್ಲಿ ಪರಾಮರ್ಶಿಸಿದ್ದಾರೆ. ಮುಖ್ಯ ಘಟನೆಗಳ ಕೊನೆಗೆ ಕೊಡುವ ನೀತಿಗಳು ರೋಚಕ: 'ಕೃಷ್ಣ ನಿಳಿದ ರಥ ಬೂದಿಯಾದುದು – ಬದುಕು ಆತನೊಲಿದರೆ; ಇಲ್ಲ, ಎಲ್ಲವೂ ಭಸ್ಮ' ಎಂಬ ವಿಸ್ಮಯ ಹುಟ್ಟಿಸುತ್ತದೆ. ಯುದ್ಧದಲಿ 'ಗೆದ್ದದ್ದು ಧರ್ಮ, ನಿಜ – ಪಾಂಡವರೆ?' ಅಲ್ಲ! ವ್ಯಾಸ ಕೊನೆಗೆನ್ನುವುದು, 'ತೋಳೆತ್ತಿ ಕೂಗುತಿಹೆ, ಕೇಳುವವರಾರುಂಟು? ಗೆದ್ದವರು ಸೋಲ್ವ, ಸೋತವರು ಸಾಯುವ ವಿದ್ಯಮಾನವೇ ಯುದ್ಧ... ಕಾಳಗವಿರದೆ ಪಡೆದ ಜಯವೆ ವರಿಷ್ಠ!'


**'ಅಹಲ್ಯಾ ಪರೀಕ್ಷಣ'** ಸಣ್ಣ ಖಂಡಕಾವ್ಯ. ಪು.ತಿ.ನ. ಅವರ ಅಹಲ್ಯೆಯನ್ನು ನೆನಪಿಗೆ ತಂದರೂ, ಅದಕ್ಕಿಂತ ಭಿನ್ನ. ದೇವೇಂದ್ರನಿಗೂ ಸೋಲದ ಪತಿವ್ರತೆ ಅಹಲ್ಯೆ. ಗೌತಮನು ವಿಚಾರಿಸದೆ ನಿರಿಂದ್ರಿಯನಾಗು ಎಂದು ಇಂದ್ರನಿಗೂ, 'ಗಾಳಿಯನೆ ಉಣ್ಣುತ್ತ, ಬೂದಿಯಲಿ ಹೊರಳುತ್ತ, ಭೂತಗಳಿಗದೃಶ್ಯಳಾಗಿ ತಪಿಸುತ ಸಾವಿರಾರು ವರ್ಷ ರಾಮ ಬರುವವರೆಗೆ ಇಲ್ಲೆ ವಾಸಿಸುತ್ತಿರು' ಎಂದು ಅಹಲ್ಯೆಗೂ ಶಾಪ ನೀಡುತ್ತಾನೆ. ತನ್ನ ಪಾತಿವ್ರತ್ಯಬಲದಿಂದ ಶಾಪವನ್ನು ವಿಫಲಗೊಳಿಸುವ ಸತ್ವವಿದ್ದರೂ, ಅಹಲ್ಯೆ ಪತಿವಚನಕ್ಕೆ ತಲೆಬಾಗಿ ರೂಪ ವಿಹೀನ ಸ್ಥಿತಿಗೆ ಮರುಗಿ ಅದರ ಬದಲು ಶಿಲೆಯಾಗುತ್ತಾಳೆ! ರಾಮನಿಗೆ ಆತಿಥ್ಯ ನೀಡಿ, ಸ್ವರ್ಗದ ಪರೀಕ್ಷೆಯಲಿ ಮರ್ತ್ಯದುತ್ತೀರ್ಣದಂತೆ ಅರೂಪದಿಂದ ರೂಪಕ್ಕೆ ಸಂಕ್ರಮಿಸುವ ಅಹಲ್ಯೆಯು ರಾಮನಿಗೆ ತಪೋರಕ್ಷೆಯನು ನೀಡಿ, ಶುಭ ಹಾರೈಸುತ್ತಾಳೆ. ಪು.ತಿ.ನ. ಅವರ ಅಹಲ್ಯೆಯ ನೆರಳಲ್ಲ ಇವಳು. ಮಹಾಸತ್ವವನ್ನು ಹೊಂದಿದವಳು.

ಒಟ್ಟಿನಲ್ಲಿ ಎರಡೂ ಕೃತಿಗಳು ಎಲ್ಲರೂ ಮೆಚ್ಚುವಂತಿವೆ. ಮಹಾಕವಿಯ ಸತ್ವವನ್ನು ಹೊಂದಿರುವ ಪ್ರೊ|| ಸಿ.ಪಿ.ಕೆ. ಅವರಿಂದ ಇನ್ನಷ್ಟು ಕಾವ್ಯಕೃತಿಗಳು ಹೊರಬರಲಿ ಎಂದು ಹಾರೈಸೋಣ.

*– ಹೆಚ್. ಪಾಂಡುರಂಗ ವಿಠಲ*

---

# ಯೋಗವಾಸಿಷ್ಠಸಾರ




*ಕೃತಿ* : **ಯೋಗವಾಸಿಷ್ಠಸಾರ**
*ಲೇಖಕಿ* : **ಡಾ.ಕೆ.ಎಲ್. ಪ್ರಸನ್ನಾಕ್ಷೀ**
*ಪ್ರಕಾಶಕರು:* **ಶ್ರೀರಾಮಕೃಷ್ಣ ಆಶ್ರಮ, ಮೈಸೂರು – 570020**
*ಪುಟಗಳು:* **108**, *ಬೆಲೆ*: **40**

**'ಯೋಗವಾಸಿಷ್ಠ'**ವು ಅದ್ವೈತ ವೇದಾಂತದ ಬೃಹದ್ ಗ್ರಂಥಗಳಲ್ಲೊಂದು. ಈ ಗ್ರಂಥದಲ್ಲಿ ವಸಿಷ್ಠ ಮಹರ್ಷಿಗಳು ವೇದಾಂತ ತತ್ತ್ವವನ್ನು ಹಲವಾರು ಸುಂದರ ಕಥೆಗಳು ಹಾಗೂ ವಿವರಣೆಗಳ ಮೂಲಕ ವಿವರಿಸುತ್ತಾರೆ. ಇಲ್ಲಿ ರಘುವಂಶದ ಶ್ರೀರಾಮಚಂದ್ರನೇ ಅವರ ಶಿಷ್ಯ. ತೀರ್ಥಯಾತ್ರೆಯಿಂದ ಮರಳಿದ ರಾಮಚಂದ್ರನು ಈ ಪ್ರಪಂಚದ ಮೇಲೆ ತೀವ್ರ ವೈರಾಗ್ಯವನ್ನು ತಾಳುತ್ತಾನೆ. ಜಗತ್ತಿನ ದುಃಖ, ನಶ್ವರತೆ ಹಾಗೂ ಶೂನ್ಯತೆಯನ್ನು ಕಂಡು ಅವನು ಖಿನ್ನನಾಗುತ್ತಾನೆ. ಜಗತ್ತಿನ ಯಾವ ವ್ಯವಹಾರದಲ್ಲಿಯೂ ಆಸಕ್ತಿ ತೋರದೆ ಮೌನಿಯಾಗಿ, ಅಂತರ್ಮುಖಿಯಾಗಿ ಇದ್ದುಬಿಡುತ್ತಾನೆ. ಮಗನ ಈ ನಡವಳಿಕೆಯನ್ನು ಗಮನಿಸಿದ ತಂದೆ ದಶರಥನು, ಶ್ರೀರಾಮನು ಸಂಸಾರವನ್ನು ತ್ಯಾಗ ಮಾಡದ ಹಾಗೆ ಬುದ್ಧಿವಾದ ಹೇಳುವಂತೆ ಕುಲಗುರುಗಳಾದ ವಸಿಷ್ಠಮಹರ್ಷಿಗಳನ್ನು ಪ್ರಾರ್ಥಿಸುತ್ತಾನೆ. ಆಗ ವಸಿಷ್ಠಮಹರ್ಷಿಗಳು ನೀಡಿದ ಉಪದೇಶಗಳನ್ನೊಳಗೊಂಡ ರಾಮಾಯಣದ ಈ ಪ್ರಕರಣವೇ **'ಯೋಗವಾಸಿಷ್ಠ.'**

ಶ್ರೀರಾಮಕೃಷ್ಣರು ಭಕ್ತರೊಡನೆ ನಡೆಸುತ್ತಿದ್ದ ದೈನಂದಿನ ಸಂಭಾಷಣೆಗಳಲ್ಲಿ, ವಸಿಷ್ಠ ಮಹರ್ಷಿಗಳು ರಾಮಚಂದ್ರನಿಗೆ ನೀಡಿದ ಉಪದೇಶವನ್ನು ಕುರಿತು ಹೇಳುತ್ತಿದ್ದುದು 'ಶ್ರೀರಾಮಕೃಷ್ಣ ವಚನವೇದ'ದಲ್ಲಿ ಹಲವು ಕಡೆ ಹೀಗೆ ಉಲ್ಲೇಖವಾಗಿದೆ: 'ವಸಿಷ್ಠಮಹರ್ಷಿಗಳು ರಾಮನ ಹತ್ತಿರಕ್ಕೆ ಬಂದು ನೋಡುತ್ತಾರೆ. ಆತ ವಿಮನಸ್ಕನಾಗಿ ಕುಳಿತಿದ್ದಾನೆ. ಅಂತರ್ಯದಲ್ಲಿ ತೀವ್ರ ವೈರಾಗ್ಯ ತುಂಬಿ ತುಳುಕಾಡುತ್ತಿದೆ. ವಸಿಷ್ಠರು ಆತನಿಗೆ ಹೇಳುತ್ತಾರೆ : ನೀನು ಸಂಸಾರವನ್ನು ಏಕೆ ತ್ಯಾಗ ಮಾಡಬೇಕು? ಸಂಸಾರ ಭಗವಂತನಿಂದ ಹೊರತಾಗಿದೆಯೇನು? ನನ್ನೊಡನೆ ವಿಚಾರ ಮಾಡಿ ನೋಡು. ಆಗ ರಾಮನ ಅನುಭವಕ್ಕೆ ಬಂತು, ಈ ಜಗತ್ತು ಪರಬ್ರಹ್ಮನಿಂದ ಉದ್ಭವವಾಗಿದೆ ಎಂದು.' *(ಶ್ರೀರಾಮಕೃಷ್ಣ ವಚನವೇದ ಭಾಗ ೧, ಪು. ೩೪೧)*

'ಯೋಗವಾಸಿಷ್ಠ'ದ ವೇದಾಂತ ತತ್ತ್ವಗಳನ್ನೊಳಗೊಂಡ ಸುಮಾರು ೨೨೩ ಶ್ಲೋಕಗಳ ಕಿರು ಸಂಗ್ರಹವೇ **'ಯೋಗವಾಸಿಷ್ಠಸಾರ.'** ರಾಮಕೃಷ್ಣಸಂಘದ ಸಂನ್ಯಾಸಿಗಳಲ್ಲೊಬ್ಬರಾದ ಸ್ವಾಮಿ ಧೀರೇಶಾನಂದಜಿಯವರು ೧೯೬೮ರಲ್ಲಿ ಈ ಗ್ರಂಥವನ್ನು ಬಂಗಾಳೀ ಭಾಷೆಗೆ ಅನುವಾದಿಸಿ ಪ್ರಕಟಿಸಿದ್ದರು. ಇದನ್ನು ಕ್ಯಾಲಿಫೋರ್ನಿಯಾದ ವೇದಾಂತ ಸೊಸೈಟಿಯ ಸ್ವಾಮಿ ಸರ್ವದೇವಾನಂದಜಿಯವರು ಆಂಗ್ಲ ಭಾಷೆಗೆ ಅನುವಾದಿಸಿದರು. ಇದು ಚೆನ್ನೈ ರಾಮಕೃಷ್ಣ ಮಠದಿಂದ ಈಗ ಪ್ರಕಟವಾಗಿದೆ. ಈ ಗ್ರಂಥಗಳಿಂದ ಸಂಗ್ರಹಿಸಿ, **'ಯೋಗವಾಸಿಷ್ಠಸಾರ'**ವೆಂಬ ಈ ಕನ್ನಡ ಅವತರಣಿಕೆಯನ್ನು ಡಾ. ಕೆ. ಎಲ್. ಪ್ರಸನ್ನಾಕ್ಷೀ ಅವರು ಸಿದ್ಧಪಡಿಸಿಕೊಟ್ಟಿದ್ದಾರೆ. ಯೋಗವಾಸಿಷ್ಠದಲ್ಲಿರುವ ಅದ್ವೈತ ತತ್ತ್ವಗಳ ಕಿರುನೋಟವನ್ನು ಒದಗಿಸುವಲ್ಲಿ ಈ ಪುಸ್ತಕ ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ.


*– ಬ್ರಹ್ಮಚಾರಿ ಅನಘಚೈತನ್ಯ*

# ಪುಷ್ಪದಂತ ಮಹರ್ಷಿ


ಕಥೆ: ಅಳಗರಾಜ


ಚಿತ್ರ: ಶಿವರಾಂ

1 ರಾಮೇಶ್ವರದಲ್ಲಿ ಶಿವನನ್ನು ಪೂಜಿಸಿದ ಬಳಿಕ, ಶ್ರೀರಾಮನು ಸೀತೆಯೊಡನೆ ಅಗಸ್ತ್ಯರ ಆಶ್ರಮವನ್ನು ತಲುಪಿದನು. ಅಗಸ್ತ್ಯರು ಶ್ರೀರಾಮನಿಗೆ ತೀರ್ಥಗಿರಿಯಲ್ಲಿರುವ ಯಮತೀರ್ಥದಲ್ಲಿ ಸ್ನಾನ ಮಾಡುವಂತೆ ಸಲಹೆ ನೀಡಿದರು.




ಅಗಸ್ತ್ಯರು ಶ್ರೀರಾಮನಿಗೆ ತೀರ್ಥಗಿರಿಯಲ್ಲಿರುವ ಹನ್ನೆರಡು ಕೆರೆಗಳನ್ನು ಕುರಿತು ವಿವರಿಸಿದರು. ಆಗ ಅವರು ಪುಷ್ಪದಂತನೆಂಬ ಮಹರ್ಷಿಯ ಕಥೆಯನ್ನು ಹೇಳಿದರು :





4
ಪುಷ್ಪದಂತ ಋಷಿಗೆ ಅವನ ಮೇಲೆ ಕರುಣೆ ಉಕ್ಕಿ ಬಂತು. ಅವನನ್ನು ಹೇಗಾದರೂ ಆ ಸಂಕಟದಿಂದ ಪಾರು ಮಾಡಬೇಕೆಂದು ಆತ ನಿರ್ಧರಿಸಿದ.
ಆಗಲಿ. ನಾನು ಶಿವನ ಬಳಿಗೆ ಹೋಗಿ ಇವನನ್ನು ಈ ದುಃಸ್ಥಿತಿಯಿಂದ ಬಿಡುಗಡೆ ಮಾಡಲು ಯತ್ನಿಸುತ್ತೇನೆ.
5
ದೇವಾ! ನರಕದಲ್ಲಿ ಒಬ್ಬ ವ್ಯಕ್ತಿ ಕೊತಕೊತ ಕುದಿಯುತ್ತಿರುವ ಎಣ್ಣೆಯಲ್ಲಿ ಬೇಯುತ್ತಿದ್ದಾನೆ. ಎಂಥ ಘೋರ ಶಿಕ್ಷೆಯನ್ನು ಅವನು ಅನುಭವಿಸುತ್ತಿದ್ದಾನೆ! ಕೇವಲ ನೀನು ಮಾತ್ರ ಅವನನ್ನು ಕ್ಷಮಿಸಬಲ್ಲೆ ಎಂದು ಯಮನಿಂದ ತಿಳಿದೆ. ಭಗವಾನ್, ದಯವಿಟ್ಟು ಆ ವ್ಯಕ್ತಿಯನ್ನು ಕ್ಷಮಿಸು!
ಪುಷ್ಪದಂತ! ಅವನು ದೇವಾಲಯದ ಪೂಜಾದ್ರವ್ಯಗಳನ್ನು ಕದ್ದದ್ದರಿಂದ ಅವನಿಗೆ ಈ ಶಿಕ್ಷೆ ಒದಗಿ ಬಂತು.
6
ದೇವಾ! ನಿನ್ನ ಕೃಪೆಯ ಮುಂದೆ ಅವನ ಅಪರಾಧ ತುಂಬ ಚಿಕ್ಕದು. ದಯವಿಟ್ಟು ಅವನನ್ನು ಕ್ಷಮಿಸಿ ಬಿಡುಗಡೆ ಮಾಡು.
ಮಗೂ, ಅವನು ಮಾಡಿದ ಅಪರಾಧ ಅತ್ಯಂತ ಘೋರ. ಅವನ ಮೇಲೆ ನಿನಗೆ ಅನುಕಂಪ ಮೂಡಿದುದು ಒಳ್ಳೆಯದೇ; ಆದರೆ ಅವನ ವಂಶದಲ್ಲಿ ಹುಟ್ಟಿದ ಯಾರಾದರೂ ತೀರ್ಥಗಿರಿಯಲ್ಲಿರುವ ಯಮ ತೀರ್ಥದಲ್ಲಿ ಸ್ನಾನಮಾಡಿ, ನನ್ನನ್ನು ಪೂಜಿಸಿದರೆ ಮಾತ್ರ ಅವನ ಪಾಪ ಪರಿಹಾರವಾಗುವುದು, ಕ್ಷಮೆ ದೊರಕುವುದು. ಅದರಿಂದ ಅವನು ಬಿಡುಗಡೆ ಹೊಂದುವನು.
7
ಪುಷ್ಪದಂತನಿಗೆ ಕರುಣೆ, ಅನುಕಂಪಗಳು ಉಕ್ಕಿ ಬಂದು, ಅವನೊಂದು ಉಪಾಯವನ್ನು ಹೇಳಿದ.
ಭಗವಾನ್! ನಾನು ಅವನ ವಂಶದಲ್ಲಿ ಜನ್ಮವೆತ್ತುವಂತಾದರೆ, ನಿನ್ನ ಅನುಗ್ರಹದಿಂದ ನಾನು ಆ ಕಾರ್ಯವನ್ನು ಮಾಡುತ್ತೇನೆ.
ಪಾಪಿಗಳನ್ನು ಉದ್ಧರಿಸುವ ನಿನ್ನ ಯತ್ನ ಸಫಲವಾಗಲಿ!

**8** ಪುಷ್ಪದಂತನು ಆ ಪಾಪಿಯ ಕುಲದಲ್ಲಿ ಜನಿಸಿದ. ಸಕಾಲದಲ್ಲಿ ಅವನು ತೀರ್ಥಗಿರಿಗೆ ಹೋದ. ಯಮತೀರ್ಥದಲ್ಲಿ ಪುಣ್ಯಸ್ನಾನ ಮಾಡಿ, ಶಿವನನ್ನು ಪೂಜಿಸಿದ.




**9** ಪುಷ್ಪದಂತನ ತಪಸ್ಸಿನ ಫಲವಾಗಿ ಶಿವನ ಗಣಗಳು ನರಕಕ್ಕೆ ಹೋಗಿ ಆ ಪಾಪಿಯನ್ನು ಬಿಡುಗಡೆ ಮಾಡಿದರು. ಆತನು ತನ್ನ ಪಾಪವನ್ನೆಲ್ಲ ಕಳೆದುಕೊಂಡು, ಶಿವನ ಗಣದಲ್ಲಿ ಒಬ್ಬನಾದ.






ಆತ ಶಿವನ ಗಣವನ್ನು ಸೇರಿಕೊಂಡ ವಿಷಯ ಪುಷ್ಪದಂತನಿಗೆ ತಿಳಿಯಲಿಲ್ಲ. ಆತ ಆ ಪಾಪಿಯನ್ನು ಅರಸುತ್ತಾ ನರಕಕ್ಕೆ ಹೋದ. ಅಲ್ಲಿ ಅವನನ್ನು ಕಾಣದೆ ಕೈಲಾಸಕ್ಕೆ ಹೋದ.